## ನಿಮ್ಮೊಡನೆ

# ಅಸಹನೆಯ ವಿಶ್ವರೂಪ

ದಕ್ಷಿಣದ ಮೇರುನಟ ಕಮಲಹಾಸನ್ ನಟಿಸಿ, ನಿರ್ದೇಶಿಸಿ, ನಿರ್ಮಿಸಿದ 'ವಿಶ್ವರೂಪಂ' ಚಿತ್ರದ ಕುರಿತು ವಿವಾದ ಉಂಟಾಗಿದೆ. 'ಈ ಚಿತ್ರದಲ್ಲಿ ಮುಸ್ಲಿಮರನ್ನು ಕೆಟ್ಟದಾಗಿ ಚಿತ್ರಿಸಲಾಗಿದೆ. ಕೆಲವು ದೃಶ್ಯಗಳನ್ನು ಕತ್ತರಿಸದಿದ್ದರೆ ಪ್ರದರ್ಶನಕ್ಕೆ ಅವಕಾಶ ಕೊಡುವುದಿಲ್ಲ' ಎಂದು  ಕೆಲವು ಮುಸ್ಲಿಂ ಸಂಘಟನೆಗಳು ಬೆದರಿಕೆ ಹಾಕಿ, ಕೋರ್ಟು ಮೆಟ್ಟಿಲು ಹತ್ತಿವೆ. ಕೋರ್ಟ್ ತಡೆಯಾಜ್ಞೆ ತೆರವಾಗಿದ್ದರೂ ತಮಿಳುನಾಡು ಸರ್ಕಾರ 'ಕಾನೂನು ಶಿಸ್ತು ಪಾಲನೆ ದೃಷ್ಟಿಯಿಂದ' ಚಿತ್ರದ ಪ್ರದರ್ಶನವನ್ನು ತಡೆಹಿಡಿದಿದೆ. ಈ ಮಧ್ಯೆ ಚಿತ್ರದ ನಿರ್ಮಾಪಕರು ಮತ್ತು ಸಂಘಟನೆಗಳ ಪ್ರತಿನಿಧಿಗಳ ನಡುವೆ ಮಾತುಕತೆ ನಡೆಯುತ್ತಿದ್ದು ಸಮಸ್ಯೆ ಬಗೆಹರಿಯುವ ನಿರೀಕ್ಷೆಯಿದೆ.

'ವಿಶ್ವರೂಪಂ' ಸಿನಿಮಾ ಜಾಗತಿಕ ಭಯೋತ್ಪಾದನೆಯೆಂಬ ರಾಜಕೀಯ ವಸ್ತುವನ್ನು ಆಧರಿಸಿದ ಚಿತ್ರ. ಮುಖ್ಯವಾಗಿ ಅಫ್ಘಾನಿಸ್ತಾನವನ್ನು ಕೇಂದ್ರವಾಗಿಟ್ಟುಕೊಂಡು ನಡೆಯುತ್ತಿರುವ ಭಯೋತ್ಪಾದಕರ ಸಂಚನ್ನು ಭಾರತದ 'ರಾ' ಏಜೆಂಟನೊಬ್ಬ ಅಮೆರಿಕದ ಎಫ್‌ಬಿಐ ಅಧಿಕಾರಿಗಳ ಜತೆ ಸೇರಿ ವಿಫಲಗೊಳಿಸುವುದು ಕಥೆ. 'ರಾ' ಏಜೆಂಟ್ ಪಾತ್ರವನ್ನು ಸ್ವತಃ ಕಮಲಹಾಸನ್ ನಿರ್ವಹಿಸಿದ್ದು, ಸಿನಿಮಾದಲ್ಲಿ ಈತ ದೈವಭಕ್ತ ಮುಸ್ಲಿಮನೇ ಆಗಿದ್ದಾನೆ. ಯಾವುದೇ ಧರ್ಮವನ್ನು ಏಕಪಕ್ಷೀಯವಾಗಿ ನಿಂದಿಸಬೇಕೆಂಬ ಉದ್ದೇಶ ಕಮಲಹಾಸನ್‌ಗೆ ಇದ್ದಿದ್ದರೆ ಹೀರೊ ಪಾತ್ರವನ್ನು ಹೀಗೆ ಬುದ್ಧಿಪೂರ್ವಕವಾಗಿ ರೂಪಿಸುತ್ತಿರಲಿಲ್ಲ. ಚಿತ್ರದಲ್ಲಿ ಪೂರಕವಾಗಿ ಬಳಕೆಯಾಗಿರುವ ಕೆಲವು ಸಂಭಾಷಣೆಗಳೂ 'ಕೆಡುಕನ್ನು ವಿರೋಧಿಸಿ ಒಳಿತನ್ನು ಎತ್ತಿಹಿಡಿಯುವ' ಕುರಾನ್‌ನ ಆಶಯವನ್ನೇ ಸೂಚಿಸುತ್ತವೆ. ಈ ಹಿನ್ನೆಲೆಯಲ್ಲಿ ಮುಸ್ಲಿಂ ಮುನ್ನೇತ್ರ ಕಳಗಂ ಎತ್ತಿರುವ ಆಕ್ಷೇಪಗಳಲ್ಲಿ ಯಾವುದೇ ಹುರುಳಿಲ್ಲ. ಸುಮಾರು 100 ಕೋಟಿ ರೂಪಾಯಿ ಬಜೆಟ್‌ನ ಈ ಚಿತ್ರವನ್ನು ಒಂದು ವರ್ಷ ಕಾಲ ಶ್ರಮ ವಹಿಸಿ ಶೂಟಿಂಗ್ ಮಾಡಲಾಗಿದ್ದು, ತಾಂತ್ರಿಕತೆಯಲ್ಲಿ ಹಾಲಿವುಡ್‌ನ ಅತ್ಯುತ್ತಮ ಸಿನಿಮಾಗಳನ್ನು ಸರಿಗಟ್ಟುವಂತೆ ತೆರೆಗೆ ತರಲಾಗಿದೆ. ಈ ಸಿನಿಮಾದಲ್ಲಿ ಅತಿಯಾದ ಹಿಂಸಾ ಪ್ರದರ್ಶನದ ಎರಡು ದೃಶ್ಯಗಳು ಮಾತ್ರ ಪ್ರಜ್ಞಾವಂತ ಪ್ರೇಕ್ಷಕರನ್ನು ಘಾಸಿಗೊಳಿಸುವಂತಿದೆ.

ಕಮಲಹಾಸನ್‌ಗೆ ಪ್ರತಿಭಟನೆಗಳು ಹೊಸತಲ್ಲ. ಈ ಹಿಂದೆ 'ದಶಾವತಾರಂ'ನಲ್ಲಿ ಚಿತ್ರಕಥೆಗೆ ಪೂರಕವಾಗಿ ವಿಷ್ಣುವನ್ನು ಶೈವರು ಸಮುದ್ರಕ್ಕೆ ಎಸೆಯುವ ದೃಶ್ಯವೊಂದಕ್ಕೆ ವೈಷ್ಣವರಿಂದ ಪ್ರತಿಭಟನೆ ಎದುರಾಗಿತ್ತು. 'ಮನ್ಮಥನ್ ಅಂಬು' ಚಿತ್ರದಲ್ಲಿ ಕಮಲಹಾಸನ್ ಬರೆದ ಹಾಡೊಂದರ ಸಾಹಿತ್ಯವನ್ನು 'ಹಿಂದೂ ಮಕ್ಕಳ್ ಕಚ್ಚಿ' ಸಂಘಟನೆಯ ತೀವ್ರ ಪ್ರತಿರೋಧದ ಹಿನ್ನೆಲೆಯಲ್ಲಿ ಕಿತ್ತು ಹಾಕಲಾಗಿತ್ತು. 'ಸಂಡಿಯರ್' ಚಿತ್ರದ ಹಿಂಸಾತ್ಮಕ ದೃಶ್ಯಗಳ ಪೋಸ್ಟರ್ ಪ್ರಕಟವಾದಾಗ ಆ ಸಮುದಾಯದವರು ತೀವ್ರ ಪ್ರತಿಭಟನೆ ನಡೆಸಿದ್ದು, ಬಳಿಕ ಚಿತ್ರದ ಹೆಸರನ್ನು 'ವಿರುಮಾಂಡಿ' ಎಂದು ಬದಲಿಸಲಾಗಿತ್ತು.

ತಮಿಳುನಾಡಿನಲ್ಲಿ ಸಿನಿಮಾ ಮತ್ತು ರಾಜಕೀಯದ ಮಧ್ಯೆ ನಿಕಟ ಸಂಬಂಧದ ಹಿನ್ನೆಲೆಯಲ್ಲಿ 'ವಿಶ್ವರೂಪಂ' ವಿವಾದದಲ್ಲಿ ಮುಖ್ಯಮಂತ್ರಿ ಜಯಲಲಿತಾರ ಕೈವಾಡವನ್ನು ತಳ್ಳಿ ಹಾಕಲಾಗದು. ಅಲ್ಲಿನ ವಿದ್ಯಮಾನಗಳನ್ನು ಗಮನಿಸಿದರೆ, ರಾಜಕೀಯದಲ್ಲಿ ಯಾವುದೇ ಪ್ರತ್ಯಕ್ಷ ಪಾತ್ರ ವಹಿಸದ ಕಮಲಹಾಸನ್ ಅವರನ್ನು ಬಗ್ಗುಬಡಿಯುವ ಉದ್ದೇಶ ಆಳುವ ಪಕ್ಷಕ್ಕಿದೆ ಎನ್ನುವ ಸಂಶಯ ಸಹಜ. ಯಾವುದೋ ಊರಿನಲ್ಲಿ ಥಿಯೇಟರ್‌ಗೆ ದುಷ್ಕರ್ಮಿಗಳು ಪೆಟ್ರೋಲ್ ಬಾಂಬ್ ಎಸೆದರೆ, ಅಂತಹ ದುಷ್ಕರ್ಮಿಗಳನ್ನು ಬಂಧಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು. ಅದು ಬಿಟ್ಟು ಹಿಂಸಾಚಾರದ ಭಯದಿಂದ ರಾಜ್ಯಾದ್ಯಂತ ಆ ಸಿನಿಮಾ ಪ್ರದರ್ಶನವನ್ನೇ ನಿಲ್ಲಿಸಿದರೆ ಪೊಲೀಸ್ ವ್ಯವಸ್ಥೆ ದುರ್ಬಲವಾಗಿದೆ ಎಂದೇ ಅರ್ಥ. ಸರ್ಕಾರಕ್ಕೆ ಧಾರ್ಮಿಕ ಉಗ್ರವಾದಿಗಳನ್ನು ಮಟ್ಟ ಹಾಕುವ ರಾಜಕೀಯ ಇಚ್ಛಾಶಕ್ತಿ ಇಲ್ಲದ ಕಡೆಗಳಲ್ಲಿ ಹೀಗೆಯೇ ಆಗುತ್ತದೆ. ಧಾರ್ಮಿಕ ಗುಂಪುಗಳ ಭಾವೋದ್ರೇಕವನ್ನು ರಾಜಕೀಯ ಲಾಭ ಗಳಿಕೆಗಾಗಿ ಬಳಸಲಾಗುತ್ತಿದೆ. ಸಿನಿಮಾದ ಸರಿ– ತಪ್ಪುಗಳನ್ನು ನಿರ್ಧರಿಸಲು ಸೆನ್ಸಾರ್ ಮಂಡಳಿ ಇದೆ. ಅಲ್ಲಿ ಸಮ್ಮತಿ ಪಡೆದ ಸಿನಿಮಾಗಳ ಪ್ರದರ್ಶನವನ್ನು ರಾಜಕೀಯ ಶಕ್ತಿಗಳು ನಿಯಂತ್ರಿಸುವುದು ಸಂವಿಧಾನದತ್ತ ಅಭಿವ್ಯಕ್ತಿ ಸ್ವಾತಂತ್ರ್ಯದ ಸ್ಪಷ್ಟ ಉಲ್ಲಂಘನೆ.

ಈ ವಿವಾದದಿಂದ ರೋಸಿ ಹೋಗಿರುವ ಕಮಲಹಾಸನ್ 'ಹೀಗೆಯೇ ಮುಂದುವರಿದರೆ ವಿದೇಶಕ್ಕೆ ವಲಸೆ ಹೋಗುತ್ತೇನೆ' ಎಂದು ಹೇಳಿರುವುದು ಸರಿಯಲ್ಲ. ರಜನಿಕಾಂತ್ ನಟಿಸಿದ 'ಬಾಬಾ' ಚಿತ್ರದ ಸಿಗರೇಟ್ ಸೇದುವ ದೃಶ್ಯದ ಬಗ್ಗೆ ಹಾಗೂ 'ಕುಚೇಲನ್' ಚಿತ್ರದ ಕ್ಷೌರದ ದೃಶ್ಯದ ಬಗ್ಗೆ ವಿವಾದಗಳು ಉಂಟಾದಾಗ ಮಾತುಕತೆಯ ಮೂಲಕ ಬಗೆಹರಿಸಲಾಗಿತ್ತು. ರಜನಿ ಚಾಣಾಕ್ಷತನ ಮೆರೆದಿದ್ದರು. 'ಯಾವುದೇ ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಪರಿಪೂರ್ಣವಲ್ಲ; ನಿರ್ಬಂಧಿತ' ಎನ್ನುವುದು ನೆನಪಿಟ್ಟುಕೊಂಡೇ ಧಾರ್ಮಿಕ ಭಾವನೆಗಳನ್ನು ಕೆರಳಿಸದಂತೆ, ಘಾಸಿಗೊಳಿಸದಂತೆ ಸಿನಿಮಾಗಳನ್ನು ನಿರ್ಮಿಸಬೇಕಿದೆ ಎನ್ನುವುದು ನಿಜ. ಸಿನಿಮಾದ ಈ ಸಾಧ್ಯತೆ ಸೆನ್ಸಾರ್ ಮಂಡಳಿಯ ಸಭೆಯಲ್ಲಿ ನಿರ್ಧಾರವಾಗಬೇಕೇ ಹೊರತು, ಕಾನೂನು ಭಂಜಕರ ಬೀದಿ ಹಿಂಸೆಯಲ್ಲಿ ಅಲ್ಲ.

■ ಬಿ.ಎಂ.ಹನೀಫ್

'ಯಾವುದೇ ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಪರಿಪೂರ್ಣವಲ್ಲ; ನಿರ್ಬಂಧಿತ' ಎನ್ನುವುದು ನೆನಪಿಟ್ಟುಕೊಂಡೇ ಧಾರ್ಮಿಕ ಭಾವನೆಗಳನ್ನು ಕೆರಳಿಸದಂತೆ, ಘಾಸಿಗೊಳಿಸದಂತೆ ಸಿನಿಮಾಗಳನ್ನು ನಿರ್ಮಿಸಬೇಕಿದೆ ಎನ್ನುವುದು ನಿಜ. ಸಿನಿಮಾದ ಈ ಸಾಧ್ಯತೆ ಸೆನ್ಸಾರ್ ಮಂಡಳಿಯ ಸಭೆಯಲ್ಲಿ ನಿರ್ಧಾರವಾಗಬೇಕೇ ಹೊರತು, ಕಾನೂನು ಭಂಜಕರ ಬೀದಿ ಹಿಂಸೆಯಲ್ಲಿ ಅಲ್ಲ.

